# ಸಾರಾಂಶ

## ಬೆವಿಕಂ ನ ಪರಿಚಯ:

- ಬೆ.ವಿ.ಕಂ ಕಂಪನಿ ಅಧಿನಿಯಮ, 1956ರ ಅಡಿಯಲ್ಲಿ 30ನೇ ಏಪ್ರಿಲ್ 2002 ರಂದು ರಚನೆಗೊಂಡು, 1ನೇ ಜೂನ್ 2002ರಿಂದ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿ, ವಿದ್ಯುತ್ ವಿತರಣೆಯಲ್ಲಿ ಇಪ್ಪತ್ತೊಂದು ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.
- ಬೆಂಗಳೂರು ನಗರದಲ್ಲಿ ತನ್ನ ಕೇಂದ್ರ ಕಚೇರಿಯನ್ನು ಹೊಂದಿರುವ ಬೆ.ವಿ.ಕಂಪನಿಯ ವ್ಯಾಪ್ತಿಯಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳು ಒಳಪಡುತ್ತವೆ.
- ಬೆವಿಕಂ ಸುಮಾರು 41,092 ಚದರ ಕಿಲೋ ಮೀಟರ್ ವ್ಯಾಪ್ತಿಯ 207 ಲಕ್ಷ ಜನ ಸಂಖ್ಯೆಯ ಪ್ರದೇಶಕ್ಕೆ ವಿದ್ಯುತ್ ವಿತರಣೆಯನ್ನು ಮಾಡುವ ಜವಾಬ್ದಾರಿ ಹೊಂದಿದೆ.

## ಬೆವಿಕಂ ನ ಕಾರ್ಯತಂತ್ರ ಹಾಗೂ ಆಕಾಂಕ್ಷೆ:

ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ ಗ್ರಾಹಕರನ್ನು ತೃಪ್ತಿ ಪಡಿಸುವಲ್ಲಿ ದಕ್ಷಿಣ ಏಷ್ಯಾದಲ್ಲೇ ಮೊದಲ ಸ್ಥಾನವನ್ನು ಹೊಂದಬೇಕೆನ್ನುವುದು ಬೆ.ವಿ.ಕಂಪನಿಯ ಆಕಾಂಕ್ಷೆಯಾಗಿದೆ. ಈ ಆಕಾಂಕ್ಷೆಯನ್ನು ಸಾಧಿಸುವುದಕ್ಕಾಗಿ ಬೆ.ವಿ. ಕಂಪನಿಯು, ಗ್ರಾಹಕರನ್ನು ತೃಪ್ತಿಗೊಳಿಸುವುದು, ನಿಯಂತ್ರಣ ಅನುಸರಣೆ, ಆಸಕ್ತದಾರರ/ಭಾಗೀದಾರರ ನಿರೀಕ್ಷೆಗಳನ್ನು ಪೂರೈಸುವುದಕ್ಕೆ ಸಂಬಂಧಿಸಿದ ಕಾರ್ಯತಂತ್ರವನ್ನು ರೂಪಿಸಿದೆ.

## ಬೆವಿಕಂ ನ ಧ್ಯೇಯೋದ್ದೇಶ:

ಕೆಳಗೆ ತಿಳಿಸಿರುವ ಕ್ರಮಗಳ ಮೂಲಕ ಗ್ರಾಹಕರನ್ನು ಗರಿಷ್ಟ ಮಟ್ಟದಲ್ಲಿ ತೃಪ್ತರನ್ನಾಗಿಸಿ, ಸಂಸ್ಥೆಯ ವ್ಯವಹರಣೆಯಲ್ಲಿ ನಿರಂತರ ಲಾಭದಾಯಕ ಫಲಿತಾಂಶ ಹೊಂದುವುದನ್ನು ಖಚಿತಪಡಿಸಿಕೊಳ್ಳುವುದು ಬೆ.ವಿ.ಕಂಪನಿಯ ಧ್ಯೇಯೋದ್ದೇಶವಾಗಿದೆ.

- ಸಮಗ್ರವಾಗಿ ಉದ್ಯೋಗಿಗಳನ್ನು ತೃಪ್ತರನ್ನಾಗಿಸುವುದು.
- ಸಂಸ್ಥೆಯ ಬೆಳವಣಿಗೆಗೆ ಅನುಗುಣವಾಗಿ ತನ್ನ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಹಾಗೂ ಉನ್ನತೀಕರಿಸಿ ಭರವಸಾಪೂರ್ವಕ ಹಾಗೂ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದು.

- ಸಂಪರ್ಕ ಮಾಧ್ಯಮದಲ್ಲಿ ಉತ್ತಮ ತಾಂತ್ರಿಕತೆಯನ್ನು ಹೊಂದಿ ವಿದ್ಯುತ್ ಕ್ಷೇತ್ರದಲ್ಲಿ ಉತ್ತಮ ಕಾರ್ಯಾಚರಣೆಯ ನಿರ್ವಹಣೆ.

## ಬೆ.ವಿ.ಕಂ. ಅಂಕಿ ಅಂಶಗಳಲ್ಲಿ:


ಬೆ.ವಿ.ಕಂಪನಿಯು, ಸುಮಾರು 207 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯುಳ್ಳ 41,092 ಚ.ಕಿ.ಮೀ. ವ್ಯಾಪ್ತಿಯ ವಿಸ್ತೃತ ಪ್ರದೇಶವನ್ನು ಹೊಂದಿದ್ದು, 139.01 ಲಕ್ಷಕ್ಕೂ ಹೆಚ್ಚಿನ ಗ್ರಾಹಕರಿಗೆ ವಿದ್ಯುತ್ ಸರಬರಾಜಿನ ಸೇವೆಯನ್ನು ಒದಗಿಸುತ್ತಿದೆ.

| ಕ್ರ.ಸಂ. | ವಿವರಣೆ | ಅಂಕಿ ಅಂಶಗಳು |
|---|---|---|
| 1. | ವಿಸ್ತೀರ್ಣ | 41,092 ಚ.ಕಿ.ಮೀ. |
| 2. | ಜಿಲ್ಲೆಗಳು | 8 |
| 3. | ಜನ ಸಂಖ್ಯೆ | 207 ಲಕ್ಷ |
| 4. | ಗ್ರಾಹಕರ ಸಂಖ್ಯೆ | 139.01 ಲಕ್ಷ |
| 5. | ಡಿಟಿಸಿ ಗಳ ಸಂಖ್ಯೆ | 478361 |
| 6. | ಎಚ್.ಟಿ. ಮಾರ್ಗದ ಉದ್ದಳತೆ | 132022.24 ಸರ್ಕ್ಯೂಟ್ ಕಿ.ಮೀ. |
| 7. | ಎಲ್.ಟಿ. ಮಾರ್ಗದ ಉದ್ದಳತೆ | 184876.40 ಸರ್ಕ್ಯೂಟ್ ಕಿ.ಮೀ. |
| 8. | ಉದ್ಯೋಗ ಹುದ್ದೆಯ ವಿವರ | |
| | ಮಂಜೂರಾದ ಹುದ್ದೆಗಳು | 24755 |
| | ಕಾರ್ಯನಿರತ ಹುದ್ದೆಗಳು | 14478 |
| 9. | ಒಟ್ಟು ಆಸ್ತಿ | ರೂ. 34030.64 ಕೋಟಿ |
| 10. | ಬೇಡಿಕೆ (ಆ.ವ–21 ಕ್ಕೆ) | ರೂ. 26235.49 ಕೋಟಿ |
| 11. | ವಸೂಲಿ (ಆ.ವ–21ಕ್ಕೆ) | ರೂ. 24763.05 ಕೋಟಿ |

## ಗ್ರಾಹಕರ ಸಂಖ್ಯೆ:

**31.03.2023 ರಂತೆ**


| ಪ್ರವರ್ಗ | ಎಲ್.ಟಿ.1 | ಎಲ್.ಟಿ.2 | ಎಲ್.ಟಿ.3 | ಎಲ್.ಟಿ.4 | ಎಲ್.ಟಿ.5 | ಎಲ್.ಟಿ.6 | ಎಲ್.ಟಿ.7 | ಹೆಚ್.ಟಿ. | ಒಟ್ಟು |
|---|---|---|---|---|---|---|---|---|---|
| ಗ್ರಾಹಕರ ಸಂಖ್ಯೆ | 843358 | 9328050 | 1278547 | 1015111 | 242326 | 177256 | 995097 | 21286 | **13901031** |
| ಶೇಕಡಾವಾರು ಪ್ರಮಾಣ | 6.07% | 67.10% | 9.20% | 7.30% | 1.74% | 1.28% | 7.16% | 0.15% | **100.00%** |



## ವಿದ್ಯುತ್ ಮಾರಾಟ:

**31.03.2023 ರಂತೆ (ದಶ ಲಕ್ಷ ಯೂನಿಟ್ಟುಗಳಲ್ಲಿ)**

| ಪ್ರವರ್ಗ | ಎಲ್.ಟಿ.1 | ಎಲ್.ಟಿ.2 | ಎಲ್.ಟಿ.3 | ಎಲ್.ಟಿ.4 | ಎಲ್.ಟಿ.5 | ಎಲ್.ಟಿ.6 | ಎಲ್.ಟಿ.7 | ಹೆಚ್.ಟಿ. | ಒಟ್ಟು |
|---|---|---|---|---|---|---|---|---|---|
| ವಿದ್ಯುತ್ ಮಾರಾಟ ಹೆಚ್ಟಿ | 182.75 | 8051.76 | 2279.15 | 6285.88 | 1350.98 | 2089.87 | 257.30 | 8858.77 | **29356.46** |
| ಶೇಕಡಾವಾರು ಪ್ರಮಾಣ | 0.62% | 27.43% | 7.76% | 21.41% | 4.60% | 7.12% | 0.88% | 30.18% | **100.00%** |




## ಆದಾಯ:

**31.03.2023 ರಂತೆ (ಕೋಟಿಗಳಲ್ಲಿ)**

| ಪ್ರವರ್ಗ | ಎಲ್.ಟಿ.1 | ಎಲ್.ಟಿ.2 | ಎಲ್.ಟಿ.3 | ಎಲ್.ಟಿ.4 | ಎಲ್.ಟಿ.5 | ಎಲ್.ಟಿ.6 | ಎಲ್.ಟಿ.7 | ಹೆಚ್.ಟಿ. | ಒಟ್ಟು |
|---|---|---|---|---|---|---|---|---|---|
| ಆದಾಯ | 170.06 | 6845.27 | 2677.27 | 3194.67 | 1321.42 | 1862.22 | 578.59 | 9477.52 | **26127.01*** |
| ಶೇಕಡಾವಾರು ಪ್ರಮಾಣ | 0.65% | 26.22% | 10.26% | 12.24% | 5.06% | 7.13% | 2.22% | 36.27% | **100.00%** |

*ಇತರೆ ಆದಾಯ ವಾದ ರೂ. 108.48 ಕೋಟಿಯನ್ನು ಹೊರತುಪಡಿಸಿ. ಇತರೆ ಆದಾಯ ರೂ. 108.48 ಕೋಟಿ ಸೇರಿ ಒಟ್ಟು ಆದಾಯವು ರೂ. 26235.49 ಕೋಟಿಗಳಷ್ಟಿರುತ್ತದೆ.



## ಬೆವಿಕಂನ ವ್ಯವಹಾರ:

- ಹಾಲಿ ಇರುವ ಪರವಾನಗಿಯಂತೆ ಬೆವಿಕಂ ಎರಡು ಬಗೆಯ ವ್ಯಾಪಾರ, ವ್ಯವಹಾರಗಳನ್ನು ನಡೆಸುತ್ತಲಿದ್ದು, ಅವು ವಿಭಿನ್ನವಾದ ಗುಣಲಕ್ಷಣದ ಕುಂದು ಕೊರತೆ ಮತ್ತು ಪ್ರತಿಫಲಗಳನ್ನು ಹೊಂದಿವೆ. 'ತಂತಿ' ವ್ಯವಹಾರದಿಂದ ಬರುವ ಆದಾಯ, ನಷ್ಟ ಮತ್ತು ಪ್ರತಿಫಲಗಳು ಸ್ಥಿರವಾಗಿದ್ದು, 'ಸಗಟು ಪೂರೈಕೆ' ವ್ಯವಹಾರಕ್ಕೆ ಹೋಲಿಸಿದಲ್ಲಿ ಸ್ವಲ್ಪ ಏರಿಳಿತಗಳನ್ನು ಹೊಂದಿದೆ. ದೀರ್ಘಾವಧಿ ಬಂಡವಾಳದ ಅವಶ್ಯಕತೆ ಇರುವಂತೆಯೇ ಅಲ್ಪಾವಧಿ ಬಂಡವಾಳದ ಅವಶ್ಯಕತೆ ಇರುತ್ತದೆಂಬ ಅಂಶವನ್ನು ಪರಿಗಣಿಸಬೇಕು. 'ತಂತಿ' ವ್ಯವಹಾರದಲ್ಲಿ ಬಂಡವಾಳ ಹೂಡಿಕೆಯು ಗಣನೀಯ ಪಾತ್ರವನ್ನು ಹೊಂದಿದ್ದು 'ಸಗಟು ಪೂರೈಕೆ' ವ್ಯಾಪಾರದಲ್ಲಿ ಅಲ್ಪಾವಧಿ ಬಂಡವಾಳವು ಗಣನೀಯವಾಗಿರುತ್ತದೆ. ವಿದ್ಯುತ್ ವ್ಯವಸ್ಥೆಯು ಅನಿಯಂತ್ರಿತವಾಗಿ ವಿಫಲವಾದರೆ 'ಸಗಟು ಪೂರೈಕೆ' ವ್ಯಾಪಾರದಲ್ಲಿ ಹೆಚ್ಚಿನ ನಷ್ಟ ಉಂಟಾಗುತ್ತದೆ. ಆದರೆ 'ತಂತಿ' ವ್ಯವಹಾರವು ಸ್ಥಿರವಾಗಿದ್ದು, ವಿದ್ಯುತ್ ಜಾಲವು ಸಾಮಾನ್ಯ ನಿರ್ವಹಣಾ ಪರಿಸ್ಥಿತಿಯಲ್ಲಿ ವಿರಳವಾಗಿ ವಿಫಲವಾಗುತ್ತದೆ.
- ಸಾಮಾನ್ಯವಾಗಿ 'ತಂತಿ'ಯನ್ನು ಸ್ವಾಭಾವಿಕ ಏಕಸ್ವಾಮ್ಯ ಎಂದು ಪರಿಗಣಿಸಬಹುದು. ಭೌಗೋಳಿಕ ಪ್ರದೇಶಗಳಾದ್ಯಂತ ವಿದ್ಯುತ್ತನ್ನು ಸರಬರಾಜು ಮಾಡುವ ವೈರ್‌ಗಳನ್ನು ನಕಲಿ ಮಾಡುವುದು ತುಂಬಾ ವೆಚ್ಚದಾಯಕ ಹಾಗು ಅನಗತ್ಯವಾಗಿದೆ. ಹಾಗೆಯೇ ವಾಸ್ತವಿಕವಾಗಿ ಇದು ಕಷ್ಟಸಾಧ್ಯ ಕೆಲಸವಾಗಿದೆ. ಆದರೆ ವ್ಯವಹಾರದ 'ಸಗಟು ಪೂರೈಕೆ' ವ್ಯಾಪಾರ ಭಾಗವು ಬಹುಜನರನ್ನು ಬೆಂಬಲಿಸುತ್ತದೆ. ಬಹು ಪೂರೈಕೆದಾರರಿಗೆ ಅವಕಾಶ ನೀಡುವುದರಿಂದ 'ತಂತಿ'ಗಳ ಪ್ರವೇಶಾವಕಾಶದ ವೆಚ್ಚವು ಬಹಳ ಪ್ರಮುಖವಾಗುತ್ತದೆ.
- 2003ರ ವಿದ್ಯುಚ್ಛಕ್ತಿ ಕಾಯ್ದೆಯು ಮುಕ್ತ ಅವಕಾಶ (open access) ಯೋಜನೆಯ ಮೂಲಕ 'ಸಗಟು ಪೂರೈಕೆ ವ್ಯವಹಾರ'ದಲ್ಲಿರುವ ಸ್ಪರ್ಧಾತ್ಮಕತೆಯನ್ನು ಪ್ರೋತ್ಸಾಹಿಸುತ್ತದೆ. ನಿಯಂತ್ರಣ ಕ್ರಮದ ಪ್ರಕಾರ, ಲೆಕ್ಕಗಳನ್ನು ಆಸ್ತಿ, ಹೊಣೆ, ಆದಾಯ, ವ್ಯಯ, ಇತರೆ ಎಲ್ಲಾ ಅಂಶಗಳನ್ನು ಎರಡೂ ವ್ಯವಹಾರಗಳ ಪ್ರತ್ಯೇಕ ಶೀರ್ಷಿಕೆಯಡಿ ವಿಭಜಿಸಿ ಆಯಾ ಬಾಬ್ತಿನ ಲೆಕ್ಕಗಳನ್ನು ನಿರ್ವಹಿಸುವುದು ಅವಶ್ಯಕವಾಗಿದೆ ಎಂದು ನಿರ್ಧರಿಸಬಹುದು.

## ವಿತರಣೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಬೆವಿಕಂ ಪರಿಗಣಿಸಿರುವ ಅಂಶಗಳು:

- ವಿತರಣಾ ಜಾಲದ ನಿರ್ವಹಣೆ ಒಳಗೊಂಡಂತೆ ವಿದ್ಯುತ್ ಉಪಕೇಂದ್ರಗಳು, ತಂತಿಗಳು, ಪರಿವರ್ತಕಗಳು ಹಾಗೂ ಇತರೆ ಉಪಕರಣಗಳ ನಿರ್ವಹಣೆ.

- ಬಂಡವಾಳ ವೆಚ್ಚ ಹೂಡಿಕೆಯಿಂದ ವಿತರಣಾ ಜಾಲದ ವಿಸ್ತರಣೆ ಹಾಗೂ ನಷ್ಟವನ್ನು ಕಡಿಮೆ ಮಾಡುವಿಕೆ.
- ವಿತರಣಾ ಜಾಲಕ್ಕೆ ಹೊಸ ಸಂಪರ್ಕಗಳ ಸೇರ್ಪಡೆ.
- ವಿತರಣೆ ವ್ಯವಹಾರಕ್ಕೆ ಸಂಬಂಧಿಸಿದ ಹಣಕಾಸು, ಲೆಕ್ಕಪತ್ರಗಳ ಕಾರ್ಯನಿರ್ವಹಣೆ.

**<u>ಸಗಟು ಪೂರೈಕೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಬೆವಿಕಂ ಪರಿಗಣಿಸಿರುವ ಅಂಶಗಳು:</u>**

- ವಿದ್ಯುತ್ ಉತ್ಪಾದಕರಿಂದ ವಿದ್ಯುತ್ ಖರೀದಿ.
- ಗ್ರಾಹಕರಿಗೆ ವಿದ್ಯುತ್ ಮಾರಾಟ.
- ಪ್ರಸರಣ ಮತ್ತು ಲೋಡ್ ಡಿಸ್ಪ್ಯಾಚ್ ಕೇಂದ್ರಗಳ ಸೇವೆಗಳನ್ನು ಗುತ್ತಿಗೆ ನೀಡುವಿಕೆ.
- ಮಾಪಕ ಓದುವಿಕೆ ಮತ್ತು ಬಿಲ್ ವಿತರಣೆ.

**<u>ಸಗಟು ವ್ಯಾಪಾರ ವ್ಯವಹಾರದ ಎಆರ್ಆರ್:</u>**

ಸಗಟು ವ್ಯಾಪಾರ ವ್ಯವಹಾರದ ಎಆರ್ಆರ್ ಕೆಳಗಿನ ಅಂಶಗಳನ್ನು ಒಳಗೊಂಡಿದೆ;

1. ನಿಯಂತ್ರಣ ಅವಧಿಯ ವರ್ಷಕ್ಕೆ ವಿದ್ಯುತ್ ಖರೀದಿಯ ವೆಚ್ಚ.
2. ವಿತರಣೆ ವ್ಯವಹಾರಕ್ಕಾಗಿ ಸೂಚಿಸಲಾಗಿರುವ ಎಲ್ಲಾ ಇತರ ಅಂಶಗಳನ್ನು ಇವು ವೆಚ್ಚ ಹಂಚಿಕೆಯ ವಿವರಣೆ ಪತ್ರ ಮತ್ತು ಅನ್ವಯವಾಗುವ ಕ್ರಮದಂತೆಯೇ ಇವೆ.
3. ದರ ರಹಿತ ಆದಾಯವನ್ನು ಒಳಗೊಂಡಂತೆ, ಪ್ರಸ್ತುತ ಜಾರಿಯಲ್ಲಿರುವ ವಿದ್ಯುತ್ ದರ ನಿಗದಿಯಿಂದ ನಿರೀಕ್ಷಿತ ಆದಾಯ. ವಿದ್ಯುತ್ ಸಾಗಣೆ/ ಮುಕ್ತ ಪ್ರವೇಶ (open access) ವ್ಯವಹಾರದಿಂದ ಬರುವ ಶುಲ್ಕ, ಮತ್ತು ಇತರ ವ್ಯವಹಾರಗಳಿಂದಾಗುವ ಆದಾಯ, ಸೀಳು–ಸಹಾಯಧನದ ಅಧಿಕ ಜಕಾ ಮತ್ತು ಇನ್ನಿತರೆ ಹೆಚ್ಚುವರಿ ಜಕಾತಿಗಳಿಂದ ಬರುವ ಆದಾಯಗಳನ್ನು ಒಳಗೊಂಡಿದೆ.
4. ಬಂಡವಾಳ ಹೂಡಿಕೆ ಯೋಜನೆ: ನಿಯಂತ್ರಣ ಅವಧಿಗೆ ಎಂವೈಟಿ ದಸ್ತಾವೇಜುಗಳನ್ನು ಆಯೋಗದ ಅನುಮೋದನೆಗಾಗಿ ಸಲ್ಲಿಸುವಾಗ ಜೊತೆಯಲ್ಲಿಯೇ ಬೆವಿಕಂ ರವರ ಬಂಡವಾಳ ಹೂಡಿಕೆಯ ಯೋಜನೆಯನ್ನೂ ಸಲ್ಲಿಸುವುದು.
5. ಆರನೇ ನಿಯಂತ್ರಣ ಅವಧಿಯ 3ನೇ ಆರ್ಥಿಕ ವರ್ಷದ ಅವಧಿಗೆ ವಿದ್ಯುತ್ ಪ್ರಮಾಣದ ಮುನ್ಸೂಚನೆ ಮತ್ತು ಮುನ್ನೋಟದ ಯೋಜನೆಯನ್ನು ಮಾನ್ಯ ಆಯೋಗದ ಮುಂದೆ ಬೆವಿಕಂ ಸಲ್ಲಿಸುತ್ತಿದೆ. ಇದರಲ್ಲಿ ಈ ಕೆಳಕಂಡ ಅಂಶಗಳು ಸೇರಿವೆ.

- ❖ ಮಾರಾಟದ ಮುನ್ನೋಟ
- ❖ ವಿದ್ಯುತ್ ಖರೀದಿಯ ಯೋಜನೆ ಮತ್ತು

❖ ಬಂಡವಾಳ ಹೂಡಿಕೆ ಕಾರ್ಯಕ್ರಮ ಮತ್ತು ವಿದ್ಯುತ್ ಪ್ರಮಾಣದ ಮುನ್ಸೂಚನೆಯ ಮಾರ್ಗಸೂಚಿಗಳಿಗೆ ಸಂಬಂಧಿಸಿದಂತೆ ನೀಡಲಾಗಿರುವ ಜಾರಿಯಲ್ಲಿರುವ ನಿರ್ದೇಶನಗಳಿಗನುಗುಣವಾಗಿ ತಯಾರಿಸಲಾದ ಬಂಡವಾಳ ಹೂಡಿಕೆ ಯೋಜನೆ.

**ವಿತರಣೆ ವ್ಯವಹಾರಕ್ಕೆ ಮತ್ತು ಸಗಟು ಪೂರೈಕೆ ವ್ಯಾಪಾರಕ್ಕೆ ಪ್ರತ್ಯೇಕಿಸಿರುವ ಎಆರ್‌ಆರ್‌ನ ವಿವರಗಳು ಕೆಳಕಂಡಂತಿವೆ:**

| ವಿವರಗಳು | ವಿತರಣೆ ವ್ಯವಹಾರ | ಸಗಟು ಪೂರೈಕೆ |
|---|---|---|
| ವಿದ್ಯುತ್ ಖರೀದಿ ವೆಚ್ಚ | | 100% |
| ದುರಸ್ತಿ ಮತ್ತು ನಿರ್ವಹಣಾ ವೆಚ್ಚ | 56% | 44% |
| ನೌಕರರ ವೆಚ್ಚ | 56% | 44% |
| ಆಡಳಿತಾತ್ಮಕ ಹಾಗೂ ಸಾಮಾನ್ಯ ವೆಚ್ಚ | 56% | 44% |
| ಸವಕಳಿ ವೆಚ್ಚ | 88% | 12% |
| ಬಡ್ಡಿ ವೆಚ್ಚ | 100% | 0% |
| ಗ್ರಾಹಕರ ಠೇವಣಿಯ ಮೇಲಿನ ಬಡ್ಡಿ | 0% | 100% |
| ಕಾರ್ಯವಾಹಿ ಬಂಡವಾಳದ ಮೇಲಿನ ಬಡ್ಡಿ | 12% | 88% |
| ಇತರೆ ಆದಾಯ | 19% | 81% |
| ರಿಟರ್ನ್ ಆನ್ ಈಕ್ವಿಟಿ | 50% | 50% |
| ರೆಗ್ಯುಲೇಟರಿ ಅಸೆಟ್ | 50% | 50% |

ವಿತರಣೆ ವ್ಯವಹಾರದಲ್ಲಿ ಒಟ್ಟು ವೆಚ್ಚಕ್ಕೆ ಸಂಬಂಧಿಸಿದಂತೆ, ದುರಸ್ತಿ ಮತ್ತು ನಿರ್ವಹಣಾ ವೆಚ್ಚ, ಆಡಳಿತಾತ್ಮಕ ಮತ್ತು ಸಾಮಾನ್ಯ ವೆಚ್ಚ ಹಾಗೂ ಬಡ್ಡಿ ಮತ್ತು ಹಣಕಾಸು ಶುಲ್ಕವನ್ನು ನಿಗದಿಪಡಿಸಲಾಗಿದೆ. ಎಲ್ಲಾ ಖಾತೆಗಳನ್ನು ವಿತರಣೆ ವ್ಯವಹಾರಕ್ಕೆ ಮತ್ತು ಸಗಟು ಪೂರೈಕೆ ವ್ಯಾಪಾರಕ್ಕೆ ಪ್ರತ್ಯೇಕಿಸಲು ದೀರ್ಘಾವಧಿಯ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ವಿತರಣಾ ಪರವಾನಗಿದಾರರ ಒಟ್ಟು ಆದಾಯದ ಅವಶ್ಯಕತೆಯು (ಎಆರ್‌ಆರ್) ವಿತರಣೆ ವ್ಯವಹಾರ ಮತ್ತು ಸಗಟು ಪೂರೈಕೆ ವ್ಯವಹಾರಗಳ ನಡುವೆ ಹಂಚಿಕೆಯಾಗಿದೆ.

ಆದುದರಿಂದ ಈ ದಾಖಲೆಯ ಭಾಗವಾಗಿ, ಮಾರಾಟದ ಮುನ್ನೋಟ, ಬಂಡವಾಳ ಹೂಡಿಕೆಯ ವಿವರಗಳು ಹಾಗೂ ವಿದ್ಯುತ್ ಖರೀದಿ ಯೋಜನೆಯ ಬಗ್ಗೆ ಅಧ್ಯಾಯ 3 ಮತ್ತು 4 ರಲ್ಲಿ ವಿವರಗಳನ್ನು ನೀಡಲಾಗಿದೆ.

## ಆರ್ಥಿಕ ವರ್ಷ–23 ರ ಟ್ರೂಯಿಂಗ್–ಅಪ್ ನ ಮುಖ್ಯಾಂಶಗಳು:

ಅಧ್ಯಾಯ 3 ರಲ್ಲಿ ಆರ್ಥಿಕ ವರ್ಷ –23 ರ ನಿವ್ವಳ ಸರಾಸರಿ ಆದಾಯ ಅವಶ್ಯಕತೆಯ(ಎ.ಆರ್.ಆರ್) ಯೋಜಿತ ಸಾರಾಂಶವನ್ನು ವಿವರಿಸಲಾಗಿದೆ.

ಆರ್ಥಿಕ ವರ್ಷ–23 ಕ್ಕೆ ಸಂಬಂಧಿಸಿದ, ತನಿಖೆಗೆ ಒಳಪಟ್ಟ ಲೆಕ್ಕಗಳು ಮತ್ತು ಕ.ವಿ.ನಿ ಆಯೋಗದಿಂದ ಅನುಮೋದಿಸಲ್ಪಟ್ಟ ತಂತಿ ವ್ಯಾಪಾರ ಮತ್ತು ಸರಬರಾಜು ವ್ಯಾಪಾರದ ಎಆರ್ಆರ್ (ARR) ನ ಮುಖ್ಯಾಂಶಗಳನ್ನು ಈ ಕೆಳಕಂಡಂತೆ ಕ್ರೋಢೀಕರಿಸಲಾಗಿದೆ.

| ಕ್ರ.ಸಂ. | ವಿವರಗಳು | ಅನುಮೋದಿತ | ವಾಸ್ತವಿಕ | ಟ್ರೂಯಿಂಗ್ ಅಪ್ |
|---|---|---|---|---|
| ಪ್ರಸ್ತುತ ಆದಾಯ (ಕೋಟಿ ರೂ.ಗಳಲ್ಲಿ) | | | | |
| 1 | ಜಕಾತಿ ಮತ್ತು ಇತರೆ ಆದಾಯ | 21324.62 | 22876.92 | 22876.92 |
| 2 | ಭಾಗ್ಯಜ್ಯೋತಿ/ ಕುಟೀರಜ್ಯೋತಿ ಜಕಾತಿಯಿಂದ ಬಂದ ಸಬ್ಸಿಡಿ ಆದಾಯ | 147.8 | 170.06 | 170.06 |
| 3 | ನೀರಾವರಿ ಪಂಪುಸೆಟ್ಟುಗಳಿಂದ ಬಂದ ಜಕಾತಿ ಸಬ್ಸಿಡಿ ಆದಾಯ | 3073.48 | 3188.52 | 3188.52 |
| | **ಒಟ್ಟು ಆದಾಯ** | **24545.9** | **26235.49** | **26235.49** |
| | **ಒಟ್ಟು ವೆಚ್ಚ (ಕೋಟಿ ರೂ.ಗಳಲ್ಲಿ)** | | | |
| 4 | ವಿದ್ಯುತ್ ಖರೀದಿ ವೆಚ್ಚ | 16279.85 | 17850.20 | 17850.20 |
| 5 | ಕೆಪಿಟಿಸಿಎಲ್ ನ ಪ್ರಸರಣಾ ವೆಚ್ಚ | 2576.672 | 2695.19 | 2695.19 |
| 6 | ಸಿಟಿಯುಐಎಲ್ ನ ಪ್ರಸರಣಾ ವೆಚ್ಚ | 1302.34 | 1772.03 | 1772.03 |
| 7 | SLDC/POSOCO ವೆಚ್ಚ | 19.65 | 17.48 | 17.48 |
| | **ವಿದ್ಯುತ್ ಖರೀದಿ ವೆಚ್ಚ ಮತ್ತು ಪ್ರಸರಣಾ ವೆಚ್ಚ** | **20178.51** | **22334.89** | **22334.89** |
| 8 | ಸಿಬ್ಬಂದಿಯ ವೆಚ್ಚ | | 2012.11 | 1989.207 |
| 9 | ದುರಸ್ತಿ ಮತ್ತು ನಿರ್ವಹಣಾ ವೆಚ್ಚ | | 261.88 | 258.341 |
| 10 | ಆಡಳಿತಾತ್ಮಕ ಹಾಗೂ ಸಾಮಾನ್ಯ ವೆಚ್ಚ | | 559.67 | 457.333 |
| | **ಒಟ್ಟು ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚ** | **2467.73** | **2833.66** | **2704.880** |
| 11 | ಸವಕಳಿ ವೆಚ್ಚ | **992.66** | **1053.95** | **1053.955** |
| | **ಬಡ್ಡಿ ಮತ್ತು ಹಣಕಾಸು ವೆಚ್ಚ** | | | |
| 12 | ಸಾಲದ ಮೇಲಿನ ಬಡ್ಡಿ | 552.57 | 571.47 | 571.470 |

| | | | | |
|---|---|---|---|---|
| 13 | ಕಾರ್ಯವಾಹಿ ಬಂಡವಾಳ ಮೇಲಿನ ಬಡ್ಡಿ | 428.9 | 530.00 | 531.950 |
| 14 | ಗ್ರಾಹಕರ ಠೇವಣಿ ಮೇಲಿನ ಬಡ್ಡಿ | 219.37 | 188.53 | 188.527 |
| 15 | ಇತರೆ ಬಡ್ಡಿ ಮತ್ತು ಹಣಕಾಸು ವೆಚ್ಚ | 39.39 | 25.05 | 48.110 |
| 16 | ಕಳೆಯಿರಿ: ಬಡ್ಡಿ ಮತ್ತು ಇತರೆ ಹೂಡಿಕೆ ವೆಚ್ಚ. | 169.15 | 86.09 | 90.444 |
| | **ಒಟ್ಟು ಬಡ್ಡಿ ಮತ್ತು ಹಣಕಾಸು ವೆಚ್ಚ** | **1071.08** | **1228.96** | **1249.613** |
| 17 | ಇತರೆ ಡೆಬಿಟ್‌ಗಳು | | | 73.011 |
| 18 | ಮುಂಚಿತ ಅವಧಿಯ ಒಟ್ಟು ಡೆಬಿಟ್ /ಕ್ರೆಡಿಟ್ | 0.00 | 0.00 | 0.00 |
| 19 | ರಿಟರ್ನ್ ಅನ್ ಇಕ್ವಿಟಿ | 353.03 | 0.00 | 0.00 |
| 20 | ಗ್ರಾಹಕರ ಸಂಬಂಧಕ್ಕಾಗಿ ನಿಧಿ | 1 | 0 | |
| 21 | ಆದಾಯ ತೆರಿಗೆ | | 93.66 | 0.00 |
| 22 | ಇತರೆ ಆದಾಯ | 427.02 | 230.83 | 213.29 |
| 23 | ಆ.ವ–20 ಗಾಗಿ ಕೊರತೆಯನ್ನು ಮುಂದಕ್ಕೆ ಸಾಗಿಸಲಾಗಿದೆ | 588.36 | | |
| 24 | ರೆಗ್ಯುಲೇಟರಿ ಅಸೆಟ್ಟಿನ ಕ್ಯಾರಿಯಿಂಗ್ ಕಾಸ್ಟ್ | 349.43 | | 34.9430 |
| 25 | ವಿತರಣ ನಷ್ಟವನ್ನು ಕಡಿಮೆ ಮಾಡಲು ಪ್ರೋತ್ಸಾಹ | | | 57.24 |
| | **ಸರಾಸರಿ ಆದಾಯದ ಅವಶ್ಯಕತೆ** (ARR) | **25574.79** | **27314.30** | **27295.24** |
| | **ವ್ಯತ್ಯಾಸ** | **-1028.89** | **-1078.81** | **-1059.75** |
| | **ವಿದ್ಯುತ್ ಬಳಕೆ (ಮಿ.ಯು)** | 29396.63 | 29356.46 | 29356.46 |
| **ಸರಾಸರಿ ಸರಬರಾಜು ವೆಚ್ಚ** | | **8.70** | **9.30** | **9.30** |

ಆಯೋಗವು ಆರ್ಥಿಕ ವರ್ಷ–23 ಕ್ಕೆ ಸರಾಸರಿ ಸರಬರಾಜು ವೆಚ್ಚ ರೂ. 8.70 ಪ್ರತಿ ಯೂನಿಟ್‌ಗಳಿಗೆ ನಿಗದಿಪಡಿಸಿದೆ.

| **ವಿವರಗಳು** | **ಆರ್ಥಿಕ ವರ್ಷ –23** | |
|---|---|---|
| | **ಅನುಮೋದಿಸಲ್ಪಟ್ಟ** | **ವಾಸ್ತವಿಕ** |
| ನಿವ್ವಳ ಸರಾಸರಿ ಆದಾಯದ ಸಾಕ್ಷಾತ್ಕಾರ | 25574.79 | 27295.24 |
| ಅನುಮೋದಿಸಲ್ಪಟ್ಟ / ಬಳಸಿದ ಬಳಕೆ(ಮಿ.ಯೂ) | 29396.63 | 29356.46 |
| ಸರಾಸರಿ ಸರಬರಾಜು ವೆಚ್ಚ(ರೂ/ಪ್ರತಿ ಯೂನಿಟ್) | **8.70** | **9.30** |

ಪ್ರಸ್ತಾವಿತ ಟ್ರೂ ಅಪ್ ಅಂಕಿಅಂಶಗಳ ಪ್ರಕಾರ, ವಿದ್ಯುತ್ ಪೂರೈಕೆಯ ಸರಾಸರಿ ವೆಚ್ಚ ಪ್ರತಿ ಯೂನಿಟ್‌ಗೆ ರೂ. 9.30 ಇದ್ದು, ಅನುಮೋದಿತ ವೆಚ್ಚವು ರೂ. 8.70 ಇರುತ್ತದೆ. ಹೀಗಾಗಿ ಆ.ವ–23

ಆದಾಯದ ಅಂತರವೂ ರೂ. 1059.75 ಕೋಟಿಗಳಾಗಿದ್ದು. ಬೆಸ್ಕಾಂ ಮೇಲೆ ತಿಳಿಸಿದಂತೆ ಟ್ರೂ ಅಪ್ ಅವಶ್ಯಕತೆಯನ್ನು ಬೆವಿಕಂ ಗೆ ಅನುಮತಿಸಲು ಗೌರವಾನ್ವಿತ ಆಯೋಗವನ್ನು ವಿನಂತಿಸುತ್ತದೆ.

ಆ.ವ–23 ಕ್ಕೆ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚದ ಹೊಂದಾಣಿಕೆಯನ್ನು ಲೆಕ್ಕೀಕರಿಸಲಾಗಿದ್ದು, ಸಂಗ್ರಹಿಸಿದ ಅಂದಾಜು FPPCA ಅನ್ನು D2A ನಮೂನೆಯಲ್ಲಿ ಸಲ್ಲಿಸಲಾಗಿದೆ; ಆ.ವ–23 ರ ವಿದ್ಯುತ್ ಖರೀದಿ ವೆಚ್ಚದಲ್ಲಿನ ವ್ಯತ್ಯಾಸವನ್ನು ಆ.ವ–24 ರಲ್ಲಿ FPPCA ಮೂಲಕ ಸಂಗ್ರಹಿಸಲಾಗುತ್ತದೆ. ಹಾಗಾಗಿ, ಬೆವಿಕಂ ಆ.ವ–23 ರ ಕೊರತೆಯಾದ ರೂ. –1059.75 ಕೋಟಿಗಳನ್ನು ಆ.ವ–25 ರ ಒಟ್ಟು ವೆಚ್ಚದಲ್ಲಿ ಸೇರಿಸುತ್ತಿಲ್ಲ.

## ಆರ್ಥಿಕ ವರ್ಷ–25 ರ ಎ.ಆರ್.ಆರ್ ನ ಮುಖ್ಯಾಂಶಗಳು:

ಅಧ್ಯಾಯ 4 ರಲ್ಲಿ ಆರನೇ ನಿಯಂತ್ರಣದ ಅವಧಿಯ 3ನೇ ವರ್ಷ ಅಂದರೆ ಆರ್ಥಿಕ ವರ್ಷ–25 ರ ನಿವ್ವಳ ಸರಾಸರಿ ಆದಾಯ ಅವಶ್ಯಕತೆ(ಎ.ಆರ್.ಆರ್) ಯೋಜಿತ ಸಾರಾಂಶ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ವಿವರಗಳು | ಆ.ವ–24 | ಆ.ವ–25 |
|---|---|---|---|
| ಪ್ರಸ್ತುತ ಆದಾಯ (ಕೋಟಿ ರೂ.ಗಳಲ್ಲಿ) | | | |
| 1 | ಜಕಾತಿ ಮತ್ತು ಇತರೆ ಆದಾಯ | 29,553.38 | 30,107.90 |
| 2 | ಭಾಗ್ಯಜ್ಯೋತಿ/ ಕುಟೀರಜ್ಯೋತಿ ಜಕಾತಿಯಿಂದ ಬಂದ ಸಬ್ಸಿಡಿ ಆದಾಯ | 155.08 | 173.87 |
| 3 | ನೀರಾವರಿ ಪಂಪುಸೆಟ್ಟುಗಳಿಂದ ಬಂದ ಸಬ್ಸಿಡಿ ಆದಾಯ | 2754.70 | 2876.70 |
| | **ಒಟ್ಟು ಆದಾಯ** | **32463.17** | **33158.47** |
| 4 | **ಒಟ್ಟು ವೆಚ್ಚ (ಕೋಟಿ ರೂ.ಗಳಲ್ಲಿ)** | | |
| 5 | ವಿದ್ಯುತ್ ಖರೀದಿ ವೆಚ್ಚ | 24092.75 | |
| 6 | ಕೆಪಿಟಿಸಿಎಲ್ ನ ಪ್ರಸರಣಾ ವೆಚ್ಚ | 2864.88 | |
| 7 | CTUIL ನ ಪ್ರಸರಣಾ ವೆಚ್ಚ | | |
| | ಎಸ್‌ಎಲ್‌ಡಿಸಿ ವೆಚ್ಚ | 14.38 | |
| 8 | **ವಿದ್ಯುತ್ ಖರೀದಿ ವೆಚ್ಚ ಪ್ರಸರಣಾ ವೆಚ್ಚ** | **26972.01** | **28863.14** |
| 9 | ಸಿಬ್ಬಂದಿ ವೆಚ್ಚ | 2185.80 | 2356.56 |
| 10 | ದುರಸ್ತಿ ಮತ್ತು ನಿರ್ವಹಣಾ ವೆಚ್ಚ | 216.70 | 233.63 |
| | ಆಡಳಿತಾತ್ಮಕ ಹಾಗೂ ಸಾಮಾನ್ಯ ವೆಚ್ಚ | 527.55 | 568.77 |
| **11** | **ಒಟ್ಟು ಕಾರ್ಯಾಚರಣೆ ಮತ್ತು ನಿರ್ವಹಣಾ** | **2930.04** | **3158.96** |

| | | | |
|---|---|---|---|
| | **ವೆಚ್ಚ** | | |
| | ಸವಕಳಿ ವೆಚ್ಚ | 1170.11 | 1334.45 |
| **12** | **ಬಡ್ಡಿ ಮತ್ತು ಹಣಕಾಸು ವೆಚ್ಚ** | | |
| 13 | ಸಾಲದ ಮೇಲಿನ ಬಡ್ಡಿ | 696.87 | 787.41 |
| 14 | ಕಾರ್ಯವಾಹಿ ಬಂಡವಾಳದ ಮೇಲಿನ ಬಡ್ಡಿ | 655.29 | 673.17 |
| 15 | ಗ್ರಾಹಕರ ಠೇವಣಿ ಮೇಲಿನ ಬಡ್ಡಿ | 341.97 | 361.47 |
| 16 | ಇತರೆ ಬಡ್ಡಿ ಮತ್ತು ಹಣಕಾಸು ವೆಚ್ಚ | 48.11 | 48.11 |
| | ಕಳೆಯಿರಿ: ಬಡ್ಡಿ ಮತ್ತು ಇತರೆ ಹೂಡಿಕೆ ವೆಚ್ಚ. | **94.97** | **99.71** |
| 17 | **ಒಟ್ಟು ಬಡ್ಡಿ ಮತ್ತು ಹಣಕಾಸು ವೆಚ್ಚ** | **1647.3** | **1770.44** |
| 18 | ಇತರೆ ಡೆಬಿಟ್‌ಗಳು | 0.00 | 0.00 |
| 19 | ಮುಂಚಿತ ಅವಧಿಯ ಒಟ್ಟು ಡೆಬಿಟ್ /ಕ್ರೆಡಿಟ್ | 0.00 | 0.00 |
| 20 | ರಿಟರ್ನ್ ಆನ್ ಇಕ್ವಿಟಿ | 0.00 | 0.00 |
| 21 | ಗ್ರಾಹಕರ ಸಂಬಂಧಕ್ಕಾಗಿ ನಿಧಿ | 1.00 | 1.00 |
| 22 | ಆದಾಯ ತೆರಿಗೆ | | |
| 23 | ಇತರೆ ಆದಾಯ | 230.83 | 230.83 |
| 24 | ರೆಗ್ಯುಲೇಟರಿ ಅಸೆಟ್ | **0** | **0.00** |
| | **ಸರಾಸರಿ ಆದಾಯದ ಅವಶ್ಯಕತೆ** | 32489.61 | 34897.16 |
| | **ವ್ಯತ್ಯಾಸ** | **-26.43** | **-1738.70** |
| | **ವಿದ್ಯುತ್ ಮಾರಾಟ** | 34965.92 | 35491.03 |
| | **ಎಸಿಎಸ್ (ವಿದ್ಯುತ್ ಸರಾಸರಿ ಸರಬರಾಜು ವೆಚ್ಚ)** | **9.29** | **9.83** |

ಆರ್ಥಿಕ ವರ್ಷ–25 ಕ್ಕೆ ಕ.ವಿ.ನಿ.ಆಯೋಗದ ಮುಂದೆ ಜಕಾತಿ ದರ ಪರಿಷ್ಕರಣಾ ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಸಲ್ಲಿಸಲಾಗಿದೆ.

| **ವಿವರಗಳು** | **ಆ.ವ–25 (ರೂ.ಕೋಟಿಗಳಲ್ಲಿ)** |
|---|---|
| ನಿವ್ವಳ ಸರಾಸರಿ ವೆಚ್ಚ (ARR) | 34897.16 |
| ವಿದ್ಯುತ್ ಮಾರಾಟದ ಆದಾಯ | 33158.47 |
| ಆದಾಯ ಕೊರತೆ | -1738.70 |
| ಆ.ವ–25ಕ್ಕೆ ವಿದ್ಯುಚ್ಛಕ್ತಿ ಮಾರಾಟ (ಮಿ.ಯೂ.ಗಳಲ್ಲಿ) | 35491.03 |
| ಜಕಾತಿ ಹೆಚ್ಚಳ/ರೂ.ಪ್ರತಿ ಯೂನಿಟ್ | 0.49 |

# ನಿವೇದನೆ (Prayer)

**ಬೆವಿಕಂ, ಆರನೇ ನಿಯಂತ್ರಣಾ ಅವಧಿಯ 3ನೇ ವರ್ಷದ (ಆ.ವ–25), ಆಯೋಗಕ್ಕೆ ಸಲ್ಲಿಸಿರುವ ಪ್ರಸ್ತುತ ಅವಶ್ಯವಿರುವ ವೆಚ್ಚವನ್ನು ಪ್ರಸ್ತಾಪಿಸುತ್ತಾ ಹಲವಾರು ಅಂಶಗಳನ್ನು ಗೌರವಾನ್ವಿತ ಆಯೋಗದ ಮುಂದೆ ಸಲ್ಲಿಸಿದ್ದು, ಆಯೋಗವು ಕೆಳಗಿನ ಅಂಶಗಳನ್ನು ದಯೆಮಾಡಿ ಅನುಮೋದಿಸಬೇಕೆಂದು ಕೋರಲಾಗಿದೆ.**

- ವೈರ್‌ಗಳ ಮತ್ತು ಸಗಟು ಪೂರೈಕೆ ವ್ಯವಹಾರದ ಆರನೇಯ ನಿಯಂತ್ರಣ ಅವಧಿಯ ಶುಲ್ಕಗಳಿಂದ ಬರಬಹುದಾದ ನರೀಕ್ಷಿತ ಆದಾಯದ ಜೊತೆಗೆ ಅರ್ಜಿಯ ಅಧ್ಯಾಯ–1 ರಿಂದ ಅಧ್ಯಾಯ–9 ರವರೆಗಿನ ಸಲಲ್ಲಿಕೆಗಳು ಕವಿನಿ ಆಯೋಗದ ಅನುಮೋದನೆಗಾಗಿ.
- ಆ.ವ–25 ರ ಆದಾಯದ ಅಂತರ ರೂ.1738.69 ರಷ್ಟಿದ್ದು ಎಲ್ಲಾ ಜಕಾತಿ ವರ್ಗಗಳಡಿಯಲ್ಲಿ ಸರಾಸರಿ ರೂ. 0.49 ರಷ್ಟರ ವಿದ್ಯುತ್ ದರ ಹೆಚ್ಚಳದ ಪ್ರಸ್ತಾವನೆಉನ್ನು ಅನುವೋದನೆಗಾಗಿ ಕವಿನಿ ಆಯೋಗದ ಮುಂದು ಸಲ್ಲಿಸಿದೆ.
- ಹೊಸ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಅಗತ್ಯವಿದ್ದಲ್ಲಿ ಮಾರ್ಪಡಿಸಲು/ಪೂರೈಸಲು ಬೆವಿಕಂ ಆಯೋಗದ ಅನುಮತಿಯನ್ನು ಪಡೆಯುತ್ತದೆ.
- ಎಲ್ಲಾ ಹೆಚ್.ಟಿ ಗ್ರಾಹಕರಿಗೆ ಸಮಯಾಧಾರಿತ ಜಕಾತಿಯ ಪ್ರಸ್ತಾವನೆ, ಹೆಚ್‌ಟಿ ಗ್ರಾಹಕರಿಗೆ ಬೇಡಿಕೆ ಶುಲ್ಕವನ್ನು ಹೆಚ್ಚಳ ಮಾಡುವ ಪ್ರಸ್ತಾವನೆ, ರಿಯಾಯಿತಿ ವಿದ್ಯುಚ್ಛಕ್ತಿದರ ಯೋಜನೆ, ವಿಶೇಷ ಪ್ರೋತ್ಸಾಹ ಯೋಜನೆಗಳನ್ನು ಮುಂದುವರೆಸುವ ಪ್ರಸ್ತಾವನೆಗಳನ್ನು ಬೆ.ವಿ.ಕಂ. ಕವಿನಿ ಆಯೋಗದ ಮುಂದೆ ಸಲ್ಲಿಸಿದೆ.